ಮಂಗಳೂರು ತಾಲ್ಲೂಕಿನ ಕೊಳಚೆ ಗ್ರಾಮಕ್ಕೆ ನೀರಂ ಸರಬರಾಜಂ ವ್ಯವಸ್ಥೆ

೧೮೫೨. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಕೊಳಚೆಕಾರಂ ಗ್ರಾಮದ ನೀರಂ ಸರಬರಾಜು ಯೋಜನೆ ಯಾವ ಹಂತದಲ್ಲಿದೆ ?

ಆ) ಆದಷ್ಟು ಶೀಘ್ರ ಆ ಕೆಲಸ ಪೂರೈಸಲಂ ಸರ್ಕಾರದವರಂ ಕ್ರಮಂ ಕೈಗೊಳ್ಳುವರೆ ?

ಶ್ರೀ ಆಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರು).—

ಅ) ಕೊಳಚೆಕಾರು ಗ್ರಾಮಂಕ್ಕೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜಂ ಯೋಜನೆಯಡಿಯಲ್ಲಿ ಒಂದು ನಳದ ನೀರಿನ ಯೋಜನೆ ರೂ. ೯-೦೫ ಲಕ್ಷಗಳಿಗೆ, ದಿನಾಂಕ ೩೦ನೇ ಏಪ್ರಿಲ್ ೧೯೮೫ರಲ್ಲಿ ಮಂಜೂರಾಗಿದೆ. ಈವರೆಗೆ ಈ ಯೋಜನೆಯಲ್ಲಿ ಜಲಮೂಲವನ್ನು ನಿರ್ಧರಿಸಲಾಗಿದೆ.

ಆ) ಕೈಗೊಳ್ಳಲಾಗುವುದು.

ಕಪಿಲ, ತಾರಕ ಜಲಾಶಯಗಳ ಪ್ರದೇಶದಲ್ಲಿ ತೋಟಗಾರಿಕೆಗೆ ಮೀಸಲಾಗಿರುವ ಭೂಮಿಯ ಬಗ್ಗೆ

೮೫೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ) —ಮಾನ್ಯ ತೋಟಗಾರಿಕೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿರುವ ಕಪಿಲ, ತಾರಕ ಜಲಾಶಯಗಳ ಪ್ರದೇಶದಲ್ಲಿ ತೋಟಗಾರಿಕೆಗೆ ಮೀಸಲಾಗಿರುವ ಭೂಮಿ ವಿಸ್ತೀರ್ಣ ಎಷ್ಟು;

ಆ) ಈ ಭೂಮಿಯಲ್ಲಿ ತೋಟಗಾರಿಕೆ ಮಾಡಲಾಗಿದೆಯೆ;

ಇ) ಇಲ್ಲದಿದ್ದಲ್ಲಿ ಕಾರಣವೇನು ಹಾಗೂ ಯಾವಾಗ ಮಾಡಲಾಗುವುದು ?

ಶ್ರೀ ಬಿ. ಸೋಮಶೇಖರ್ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಕಪಿಲ ಜಲಾಶಯದಲ್ಲಿ ೫೦ ಎಕರೆ ಮತ್ತು ತಾರಕಾ ಜಲಾಶಯದಲ್ಲಿ ೧೫ ಎಕರೆ ಭೂಮಿಯನ್ನು ಮೀಸಲಾಗಿರಿಸಿದೆ.

ಆ) ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಕಾಲೇಜುಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಯ ಬಗ್ಗೆ

೧೪೬೧. ಶ್ರೀ ರಾಮನಾಥ ರೈ (ಬಂಟವಾಳ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ

ಅ) ರಾಜ್ಯದ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕ ಹುದ್ದೆಯ ಒಟ್ಟು ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ದೈಹಿಕ ಶಿಕ್ಷಣ ಪದವಿ ಪಡೆದವರ ಒಟ್ಟು ಸಂಖ್ಯೆ ಎಷ್ಟು?

ಇ) ಖಾಲಿ ಇರುವ ಸದರಿ ಹುದ್ದೆಗಳಿಗೆ ದೈಹಿಕ ಶಿಕ್ಷಣ ಪದವಿ ಪಡೆದವರನ್ನು ಯಾವಾಗ ನೇಮಿಸಲಾಗುವುದು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು) —

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವ ಕಾಲೇಜುಗಳು ಹಾಗೂ ಕಿರಿಯ ಕಾಲೇಜುಗಳಲ್ಲಿ ೬೯ ದೈಹಿಕ ಶಿಕ್ಷಕ ಹುದ್ದೆಗಳು ಖಾಲಿ ಇವೆ.

ಆ) ೨೨೮ (ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ)

ಇ) ಆದಷ್ಟು ಶೀಘ್ರವಾಗಿ

ಮಂಡಲ್ ಪಂಚಾಯತ್ ಜಿಲ್ಲಾ ಪರಿಷತ್ ಚುನಾವಣೆ

೪೯೮. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಂಡಲ್ ಪಂಚಾಯಿತ್‌ಗಳಿಗೆ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು ?

ಆ) ವಿಳಂಬಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—

ಅ) ಕಾಯ್ದೆಯಲ್ಲಿ ಅಡಕವಾಗಿರುವ ಕಲವೊಂಗಳ ರೀತ್ಯಾ ಚುನಾವಣೆಗಳ ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗಿವೆ. ಪೂರ್ವಭಾವಿ ಸಿದ್ಧತೆಗಳು ಮುಂಗಿದ ಮೇಲೆ ಮಂತ್ರಿಮಂಡಲ ಚುನಾವಣೆಯ ದಿನಾಂಕ ಗೊತ್ತುಪಡಿಸುವುದು.

ಆ) 'ಅ'ನಲ್ಲಿ ಉತ್ತರಿಸಲಾಗಿದೆ.

ರಾಜ್ಯಪತ್ರ (ಗೆಜೆಟ್) ತಡವಾಗಿ ತಲುಪುವ ಬಗ್ಗೆ

೫೧೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ಪ್ರಕಟಣೆ ದಿನಾಂಕ ಹಾಗೂ ಕಡೇ ದಿನ ಅವಧಿ ಮುಗಿದು ೨-೩ ತಿಂಗಳ ನಂತರ ತಲುಪುವುದು. ಇದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ

ಆ) ಈ ರೀತಿಯ ತಡವಾಗದಂತೆ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ಡಿಸೆಂಬರ್ ೮೫ ರಿಂದ ಮೊದಲ್ಗೊಂಡು ಈ ತಹಲ್‌ವರೆಗೆ ಎಲ್ಲಾ ರಾಜ್ಯ ಪತ್ರಗಳು ಸಕಾಲದಲ್ಲಿ ಪ್ರಕಟವಾಗಿವೆ.

ಶಿಕಾರಿಪುರದ ಸರಕಾರಿ ಕಾಲೇಜು ಕಟ್ಟಡದ ಬಗ್ಗೆ

೨೭೧. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕಳೆದ ೧೦ ವರ್ಷಗಳಿಂದ ಶಿಕಾರಿಪುರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಶಾಲೆ ನಡೆಸಲು ಕೊಠಡಿಗಳಿಲ್ಲದೆ ಕಳೆದ ೨ ವರ್ಷಗಳಿಂದಲೂ ಕೊಠಡಿ ಕಟ್ಟಿಸಲು ಲೋಕೋಪಯೋಗಿ ಇಲಾಖೆಗೆ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲು ತಿಳಿಸಲಾಗಿದೆ ಮತ್ತು ಕೊಠಡಿಗಳನ್ನು ಕಟ್ಟಲಾಗುತ್ತೆ ಎಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೆ ?

ಆ) ಈ ವರ್ಷವಾದರೂ ಅಲ್ಲಿಯ ವಿದ್ಯಾರ್ಥಿಗಳ ತೊಂದರೆಯನ್ನು ಪರಿಹರಿಸಿ ಕಟ್ಟಡದ ಕೆಲಸ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?